

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# 'ದಯಾಮರಣ' ಕೊಲೆಯಲ್ಲವೇ?

ವಿಯೆನ್ನಾ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿರುವಾಗ ಆತ್ಮೀಯರಿಂದ ತಿಳಿದುಬಂದ ಎರಡು ದುರ್ಘಟನೆಗಳು. ವೃದ್ಧರೊಬ್ಬರು ಆಸ್ಪತ್ರೆಗೆ ದಾಖಲಾಗಿದ್ದರು. ಅವರ ಮಗಳು ಪ್ರತಿದಿನವೂ ಆಸ್ಪತ್ರೆಗೆ ಹೋಗಿ ತಂದೆಯನ್ನು ಕಂಡು ಕ್ಷೇಮಸಮಾಚಾರ ವಿಚಾರಿಸಿಕೊಂಡು ಬರುತ್ತಿದ್ದಳು. ತನ್ನ ತಂದೆಯನ್ನು ನೋಡಿಕೊಳ್ಳುತ್ತಿದ್ದ ಭಾರತೀಯ ವೈದ್ಯರನ್ನು ತಪ್ಪದೆ ಭೇಟಿಮಾಡಿ ಕೃತಜ್ಞತೆಯನ್ನು ಸೂಚಿಸಿ ಚಿಕಿತ್ಸೆಯ ವಿವರಗಳನ್ನು ಪಡೆಯುತ್ತಿದ್ದಳು. ನಿತ್ಯವೂ ಹೀಗೆ ತಂದೆಯ ಆರೋಗ್ಯವನ್ನು ವಿಚಾರಿಸಿಕೊಳ್ಳಲು ಬರುತ್ತಿದ್ದ ಆ ಮಹಿಳೆಯ ಬಗ್ಗೆ ಸಹಜವಾಗಿ ವೈದ್ಯರಿಗೆ ಗೌರವಭಾವನೆಯುಂಟಾಯಿತು. ಈ ದೇಶಗಳಲ್ಲಿಯೂ ತಂದೆಯನ್ನು ಇಷ್ಟು ಗಾಢವಾಗಿ ಪ್ರೀತಿಸುವ ಮಕ್ಕಳಿದ್ದಾರಲ್ಲಾ ಎಂದು ಆಶ್ಚರ್ಯವೂ ಉಂಟಾಯಿತು. ಕೆಲವು ದಿನಗಳ ನಂತರ ಒಂದು ಮಧ್ಯರಾತ್ರಿ ಆ ಮಹಿಳೆಯ ತಂದೆಯ ದೇಹಾರೋಗ್ಯ ಇದ್ದಕ್ಕಿದ್ದಂತೆಯೇ ವಿಷಮಿಸಿತು. ಅವರನ್ನು ನೋಡಿಕೊಳ್ಳುತ್ತಿದ್ದ ವೈದ್ಯರು ತಂದೆಯನ್ನು ಬಹಳವಾಗಿ ಪ್ರೀತಿಸುತ್ತಿದ್ದ ಆ ಮಹಿಳೆಯನ್ನು ಕೂಡಲೇ ದೂರವಾಣಿಯ ಮೂಲಕ ಸಂಪರ್ಕಿಸಿದರು. 'ನಿಮ್ಮ ತಂದೆ ಜೀವನ್ಮರಣದ ತೂಗುಯ್ಯಾಲೆಯಲ್ಲಿದ್ದಾರೆ, ಬೇಗನೆ ಬನ್ನಿ' ಎಂದು ಸೂಚಿಸಿದರು. ಅವರ ತುರ್ತುಕರೆಗೆ ಆ ಮಹಿಳೆಯಿಂದ ಬಂದ ಪ್ರತಿಕ್ರಿಯೆ ವೈದ್ಯರ ಮನಸ್ಸಿಗೆ ಆಘಾತವನ್ನುಂಟುಮಾಡಿತು. "Bitte entschüldigen Sie Herr Doktor! Ich kann nicht kommen. Mein Mann and meine Kinder schlafen jetzt. Es ist zu spät in der Nacht. Können Sie bitte nicht etwas tun damit er bis morgen lebt?" (ದಯವಿಟ್ಟು ಕ್ಷಮಿಸಿ ಡಾಕ್ಟ್ರೆ. ಈಗ ನನಗೆ ಬರಲು ಆಗುವುದಿಲ್ಲ. ನನ್ನ ಗಂಡ ಮತ್ತು ಮಕ್ಕಳು ಮಲಗಿದ್ದಾರೆ. ಈಗ ಅಪರಾತ್ರಿ ಬಹಳ ಹೊತ್ತಾಗಿದೆ. ನೀವು ಹೇಗಾದರೂ ಮಾಡಿ ನಾಳೆ ಬೆಳಗಿನವರೆಗೆ ನನ್ನ ತಂದೆ ಬದುಕಿರುವಂತೆ ಮಾಡಲು ಸಾಧ್ಯವಿಲ್ಲವೇ?)

ಇನ್ನೊಂದು ಘಟನೆ. ರಸ್ತೆ ಅಪಘಾತದಲ್ಲಿ ಒಬ್ಬ ಮಹಿಳೆಯ ಪತಿ ತೀವ್ರವಾಗಿ ಗಾಯಗೊಂಡು ಮೂರ್ಛೆ ಹೋದ. ಕೂಡಲೇ ಆಸ್ಪತ್ರೆಗೆ ಸೇರಿಸಲಾಯಿತು. ತಲೆಗೆ ತುಂಬಾ ಪೆಟ್ಟು ಬಿದ್ದು ರಕ್ತ ಒತ್ತರಿಸುತ್ತಿತ್ತು. ಉಸಿರಾಟದ ತೊಂದರೆಯೂ ಇತ್ತು. ತುರ್ತು ಚಿಕಿತ್ಸೆ ನೀಡಿದ ವೈದ್ಯರು ಕೃತಕ ಉಸಿರಾಟಕ್ಕೆಂದು ಆಮ್ಲಜನಕದ ನಳಿಕೆಯನ್ನು (ವೆಂಟಿಲೇಟರ್) ಮೂಗಿಗೆ ಜೋಡಿಸಿದರು. ಒಂದೆರಡು ದಿನಗಳಾದರೂ ಗಂಡನಿಗೆ ಪ್ರಜ್ಞೆ ಮರಳಿ ಬರಲಿಲ್ಲ. ಕೃತಕ ಉಸಿರಾಟ ಮುಂದುವರಿಸಿದರೆ ಇನ್ನೂ ಸ್ವಲ್ಪ ದಿನ ಬದುಕಬಹುದು. ಬದುಕಿ ಉಳಿದರೂ ನೆನಪಿನ ಶಕ್ತಿ ಉಳಿಯುತ್ತದೆಯೆಂದು ಹೇಳಲು ಸಾಧ್ಯವಿಲ್ಲ, ಬದುಕಿನುದ್ದಕ್ಕೂ ಯಾರನ್ನೂ ಗುರುತಿಸಲಾಗದೆ ನಿಷ್ಕ್ರಿಯರಾಗಿ ಮರದ ಕೊರಡಿನಂತೆ ಬಿದ್ದಿರುತ್ತಾರೆ ಎಂದು ವೈದ್ಯರು ಕೈಚೆಲ್ಲಿದರು. ಕೃತಕ ಉಸಿರಾಟ ಮುಂದುವರಿಸಬೇಕೇ ಬೇಡವೇ ಎಂದು ವೈದ್ಯರು ಕೇಳಿದಾಗ ಆ ಮಹಿಳೆ ದುಃಖಿಸುತ್ತಲೇ ಬೇಡವೆಂದು ಹೇಳಿದಳು. ಆಮ್ಲಜನಕದ ನಳಿಕೆಯನ್ನು ತೆಗೆಯಲಾಯಿತು. ಕ್ಷಣಾರ್ಧದಲ್ಲಿ ಗಂಡ ಮರಣ ಹೊಂದಿದ.

ಮೇಲಿನ ಎರಡೂ ಘಟನೆಗಳಲ್ಲಿ ಭಾರತೀಯ ಮಹಿಳೆಯಾಗಿದ್ದರೆ ಅವಳ ಪ್ರತಿಕ್ರಿಯೆ ಹೇಗಿರುತ್ತಿತ್ತು? ಮೊದಲನೆಯ ಘಟನೆಯಲ್ಲಿ ತಂದೆ ಈಗಲೋ ಆಗಲೋ ಸಾಯುವ ಸ್ಥಿತಿಯಲ್ಲಿದ್ದಾನೆಂದು ತಿಳಿದುಬಂದಾಗ ಮಧ್ಯರಾತ್ರಿಯಾದರೇನಂತೆ ಗಂಡನನ್ನು ಎಳಿಸಿ ಮಕ್ಕಳನ್ನು ಎತ್ತಿಕೊಂಡು ವಿಯೆನ್ನಾ ಬೀದಿಗಳಲ್ಲಿ ಬೆಂಗಳೂರಿನವರೆಗೂ ಕೇಳಿಸುವಂತೆ ಪ್ರಲಾಪಿಸುತ್ತಾ ಕೂಡಲೇ ಆಸ್ಪತ್ರೆಗೆ ಧಾವಿಸುತ್ತಿದ್ದಳಲ್ಲವೇ? ವೈಯಕ್ತಿಕ ಕಷ್ಟಗಳು ಏನೇ ಇರಲಿ ತಂದೆ ಸಾವಿನ ಅಂಚಿನಲ್ಲಿರುವಾಗ ಅವನು ಕಣ್ಮುಚ್ಚುವುದರೊಳಗೆ ಒಂದು ಕ್ಷಣವಾದರೂ ಕಂಡು ಮಾತನಾಡಿಸಬೇಕೆಂದು ಅವಳ ಹೃದಯ ಚಡಪಡಿಸುತ್ತಿತ್ತಲ್ಲವೇ? ಇನ್ನು ಎರಡನೆಯ ಘಟನೆಯನ್ನು ತೆಗೆದುಕೊಂಡರೆ ಯಾವ ಭಾರತೀಯ ಮಹಿಳೆಯೂ ತನ್ನ ತಾಳಿಯನ್ನು ತಾನೇ ಕೈಯಿಂದ ಕಿತ್ತುಕೊಳ್ಳಲು ಬಯಸುವುದಿಲ್ಲ. ಎಷ್ಟೇ ಖರ್ಚುಬಂದರೂ ತನ್ನ ಮೈಮೇಲಿರುವ ಆಭರಣಗಳನ್ನು ಒತ್ತೆ ಇಟ್ಟಾದರೂ ಸಾಲ ಮಾಡಿ ಹಣವನ್ನು ತಂದುಕೊಟ್ಟು ಪತಿಯ ಕೃತಕ ಉಸಿರಾಟವನ್ನು ಮುಂದುವರಿಸುವಂತೆ ವೈದ್ಯರನ್ನು ಬೇಡಿಕೊಳ್ಳುತ್ತಿದ್ದಳಲ್ಲವೇ? ಇಂದಲ್ಲ ನಾಳೆ ತನ್ನ ಗಂಡ ಗುಣಮುಖನಾಗುತ್ತಾನೆಂಬ ಆಶಾಭಾವನೆಯನ್ನು ಹೊಂದಿರುತ್ತಿದ್ದಳಲ್ಲವೇ?

ಮೇಲಿನ ಎರಡು ಘಟನೆಗಳು ನಮ್ಮ ನೆನಪಿಗೆ ಬರಲು ಕಾರಣ ಓದುಗರೊಬ್ಬರಾದ ನಂದಾ ಜನಾರ್ದನ್ ಅವರಿಂದ ಇತ್ತೀಚೆಗೆ ತಾನೆ ಬಂದ ಈ-ಮೇಲ್ ಪತ್ರ. ನಮ್ಮ ಅಂಕಣದಲ್ಲಿ ಜೀವನದ ಅನೇಕ ಸಂದಿಗ್ಧ ಪ್ರಸಂಗಗಳನ್ನು ಓದಿದ ಅವರಿಗೆ ಕಾಡುತ್ತಿರುವ ಪ್ರಶ್ನೆ ಹೀಗಿದೆ: "ಸ್ವಾಮೀಜಿ, ದಯವಿಟ್ಟು ನನ್ನ ಸಂದೇಹಕ್ಕೆ ಉತ್ತರಿಸಿ. ಯಾರಾದರೂ ಮನೆಯಲ್ಲಿ ಪ್ರೀತಿಯಿಂದ ಒಂದು ಆಕಳನ್ನು ಸಾಕಿದ್ದಾರೆ ಎಂದಿಟ್ಟುಕೊಳ್ಳಿ. ಆಕಳು ಬಿದ್ದು ಸೊಂಟ ಮುರಿದುಕೊಂಡಿದೆ. ವೈದ್ಯರು ಕೈತಿರುಗಿಸಿದ್ದಾರೆ. ಅದಕ್ಕೆ ದಯಾಮರಣ ನೀಡುವುದು ಸರಿಯೇ? ಹಾಲುಂಡು ವಿಷ ನೀಡುವುದು ಯಾವ ನ್ಯಾಯ?" ಹಸುವಿನ ಹಾಲುಂಡು ಅದು ನಿತ್ರಾಣಗೊಂಡು ನಿಷ್ಪ್ರಯೋಜಕವಾದಾಗ ಅದನ್ನು ಕಟುಕರಿಗೆ ಕೊಡುವುದು ಕೃತಘ್ನತೆ ಎನಿಸಿಕೊಳ್ಳುತ್ತದೆ ಎಂಬುದರಲ್ಲಿ ಯಾವ ಸಂದೇಹವೂ ಇರಬೇಕಾಗಿಲ್ಲ. ಹಾಲನುಣಿಸಿದ ಹಸುವಿಗೆ ವಿಷವನುಣಿಸುವುದು ಯಾರಿಗೂ ಇಷ್ಟವಾಗುವುದಿಲ್ಲ. ಅಂತೆಯೇ ಸೊಂಟ ಮುರಿದುಕೊಂಡು ಬಿದ್ದ ಹಸುವಿನ

ನರಳಾಟವನ್ನು ನೋಡಲೂ ಸಹ ಯಾರಿಗೂ ಇಷ್ಟವಾಗುವುದಿಲ್ಲ. ಈ ಸಂದಿಗ್ಧತೆಯಲ್ಲಿ ಹಸು ನರಳುವುದನ್ನು ತಪ್ಪಿಸಲು 'ದಯಾಮರಣ' ದ ಮೂಲಕ ಸುಖವಾಗಿ ಸಾಯುವಂತೆ ಮಾಡಿದರೆ ತಪ್ಪೇನು? ಎಂದು ಕೇಳುವವರಿದ್ದಾರೆ. ಇದೇ ಪ್ರಶ್ನೆಯನ್ನು ಅವರಿಗೆ ಜನ್ಮ ನೀಡಿ ಹಾಲುಣಿಸಿದ ವೃದ್ಧ ತಾಯಿ ಬಚ್ಚಲುಮನೆಯಲ್ಲಿ ಬಿದ್ದು ಸೊಂಟಮುರಿದುಕೊಂಡಿದ್ದರೆ ಏನು ಮಾಡುತ್ತಿದ್ದಿರಿ ಎಂದು ಕೇಳಲು ಬರುತ್ತದೆಯಲ್ಲವೇ? ನಿಮ್ಮ ತಾಯಿ ಹಾಸಿಗೆ ಹಿಡಿದು ನರಳುವುದನ್ನು ನೋಡಲಾಗದೆ 'ದಯಾಮರಣ'ಕ್ಕೆ ಗುರಿಪಡಿಸುತ್ತೀರಾ ಎಂದು ಯಾರಾದರೂ ಕೇಳಿದರೆ ನಿಮ್ಮ ಮನಸ್ಸಿಗೆ ಹೇಗಾಗುತ್ತದೆ ಎಂದು ಚಿಂತಿಸಿದರೆ ಉತ್ತರ ಸಿಕ್ಕುತ್ತದೆ. ಒಂದು ಬುದ್ಧಿಯ ಸ್ತರದಲ್ಲಿ ಹುಟ್ಟುವ ಶುಷ್ಕ ತರ್ಕ ಮತ್ತೊಂದು ಹೃದಯದ ಆಳದಲ್ಲಿ ಉದ್ಭವಿಸುವ ಭಾವನೆಗಳ ಮಹಾಪೂರ. ಹೃದಯದ ಭಾವನೆಗಳು ಶುಷ್ಕ ತರ್ಕವನ್ನು ಮೆಟ್ಟಿನಿಲ್ಲುತ್ತವೆ. 'ಮಾ ಹಿಂಸ್ಯಾತ್ ಸರ್ವಭೂತಾನಿ' ಅಂದರೆ ಯಾವ ಪ್ರಾಣಿಯನ್ನೂ ಹಿಂಸಿಸಬೇಡ ಎಂದು ಒಂದೆಡೆ ಹೇಳುತ್ತೀರಿ ಮತ್ತೊಂದೆಡೆ 'ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ' ಎಂದು ಯಜ್ಞಯಾಗಾದಿಗಳಲ್ಲಿ ಪಶುಪ್ರಾಣಿಗಳನ್ನು ಬಲಿಕೊಡಬೇಕೆನ್ನುತ್ತೀರಿ. ಇದು ತಪ್ಪಲ್ಲವೇ? ಎಂಬ ಪ್ರಶ್ನೆಗೆ ಪೂರ್ವಮೀಮಾಂಸೆಯು (ಭಾರತೀಯ ಷಡ್‌ದರ್ಶನಗಳಲ್ಲಿ ಒಂದು) ಕೊಡುವ ಉತ್ತರವೆಂದರೆ: ವೇದವಿಹಿತವಾದ ಹಿಂಸೆಯನ್ನು ಹಿಂಸೆಯೆಂದು ಪರಿಗಣಿಸಲಾಗದು; ಅಲ್ಲದೆ ಬಲಿಯಾದ ಪಶುವೂ ಸ್ವರ್ಗಕ್ಕೆ ಹೋಗುವುದರಿಂದ ಚಿಂತಿಸಬೇಕಿಲ್ಲ. ಈ ಉತ್ತರದಿಂದ ಸಿಡಿಮಿಡಿಗೊಂಡ, ನಾಸ್ತಿಕನೆಂದು ತಿರಸ್ಕಾರಕ್ಕೆ ಗುರಿಯಾದ ಚಾರ್ವಾಕನ ಪ್ರಶ್ನೆ ಹೀಗಿದೆ:

**ಪಶುಶ್ಚೇತ್ ನಿಹತಃ ಸ್ವರ್ಗಂ ಜ್ಯೋತಿಷ್ಟೋಮೇ ಗಮಿಷ್ಯತಿ ।**
**ಸ್ವಪಿತಾ ಯಜಮಾನೇನ ಕಸ್ಮಾನ್ನ ಹಂತುಂ ಶಕ್ಯತೇ ॥**

'ಜ್ಯೋತಿಷ್ಟೋಮ' ಎಂಬ ಯಾಗದಲ್ಲಿ ಬಲಿಕೊಟ್ಟ ಪಶುಪ್ರಾಣಿಗಳು ಸ್ವರ್ಗಕ್ಕೆ ಹೋಗುವುದಾದರೆ ಸ್ವರ್ಗಾಕಾಂಕ್ಷಿಯಾದ ಆ ವ್ಯಕ್ತಿಯು ತನ್ನ ತಂದೆಯನ್ನೇ ಏಕೆ ಬಲಿಕೊಡಬಾರದು? ತಂದೆ-ಮಗ ಇಬ್ಬರೂ ಸುಖವಾಗಿ ಸ್ವರ್ಗದಲ್ಲಿ ಇರಬಹುದಲ್ಲಾ!

ಯಾರಾದರೂ ಕ್ಯಾನ್ಸರ್ ಇತ್ಯಾದಿ ವಾಸಿಯಾಗದ ಕಾಯಿಲೆಗಳಿಗೆ ತುತ್ತಾಗಿ ತುಂಬಾ ನೋವನ್ನು ಅನುಭವಿಸುತ್ತಿದ್ದರೆ ಅಂತಹ ರೋಗಿಗಳನ್ನು ಹೆಚ್ಚಿನ ನೋವಿಲ್ಲದಂತೆ ಸಾಯಿಸುವುದಕ್ಕೆ 'ದಯಾಮರಣ' ಎನ್ನುತ್ತಾರೆ. ದಯಾಮರಣದಲ್ಲಿ ಎರಡು ವಿಧ. ವ್ಯಕ್ತಿ ತಾನಾಗಿಯೇ ನಿರ್ಧರಿಸುವುದು ಅಥವಾ ತನ್ನ ಪರವಾಗಿ ಬೇರೊಬ್ಬರು ನಿರ್ಧರಿಸುವುದು. ದಯಾಮರಣವನ್ನು ಕಾನೂನುಬದ್ಧಗೊಳಿಸಬೇಕೇ ಬೇಡವೇ ಎಂಬ ವಿಚಾರದಲ್ಲಿ ಜಗತ್ತಿನಾದ್ಯಂತ ತುಂಬಾ ವಿವಾದವಿದೆ. ಯೂರೋಪಿನ ನೆದರ್‌ಲ್ಯಾಂಡ್ಸ್ ಮತ್ತು ಬೆಲ್ಜಿಯಂ ಈ ಎರಡು ದೇಶಗಳು ಮಾತ್ರ 2002 ರಲ್ಲಿ ಕೆಲವು ಪ್ರಸಂಗಗಳಲ್ಲಿ ದಯಾಮರಣವನ್ನು ಕಾನೂನುಬದ್ಧಗೊಳಿಸಿವೆ. ಉಪಲಬ್ಧ ಅಂಕಿಸಂಖ್ಯೆಗಳ ಪ್ರಕಾರ ನೆದರ್‌ಲ್ಯಾಂಡ್ಸ್‌ನಲ್ಲಿ 2003 ರಲ್ಲಿ 1626 ಜನರು ದಯಾಮರಣವನ್ನು ಹೊಂದಿರುತ್ತಾರೆ. ಆಸ್ಟ್ರೇಲಿಯಾ ದೇಶವು ದಯಾಮರಣವನ್ನು 1995ರಲ್ಲಿ ಕಾನೂನುಬದ್ಧಗೊಳಿಸಿ ನಂತರ ಆ ಕಾನೂನನ್ನು ರದ್ದುಪಡಿಸಿದೆ. 1997 ರಲ್ಲಿ ಅಮೇರಿಕಾದ ಸರ್ವೋಚ್ಚನ್ಯಾಯಾಲಯವು ವಾಸಿಯಾಗದ ರೋಗದಿಂದ ನರಳುತ್ತಿರುವ ಯಾವುದೇ ವ್ಯಕ್ತಿಗೆ ದಯಾಮರಣದ ಮೂಲಕ ತನ್ನನ್ನು ಸಾಯಿಸುವಂತೆ ವೈದ್ಯರನ್ನು ಒತ್ತಾಯಪಡಿಸಲು ಮೂಲಭೂತ ಹಕ್ಕಿಲ್ಲವೆಂದು ತೀರ್ಪು ನೀಡಿದೆ. ಸ್ವಿಟ್ಜರ್‌ಲೆಂಡ್‌ನಲ್ಲಿ ದಯಾಮರಣ ಕಾನೂನುಬಾಹಿರ. ಆದರೆ ಅಲ್ಲಿ ಆತ್ಮಹತ್ಯೆಗೆ ನೆರವಾಗುವುದು ಕಾನೂನುಬಾಹಿರ ಕೃತ್ಯವಲ್ಲ. ಆದರೆ ಅದರ ಹಿಂದೆ ಯಾವುದೇ ಸ್ವಾರ್ಥ ಇರಬಾರದೆಂಬ ನಿರ್ಬಂಧವಿದೆ.

ದಯಾಮರಣಕ್ಕೆ ಇಂಗ್ಲೀಷ್‌ನಲ್ಲಿ "Mercy Killing" ಅಥವಾ "Euthanasia" ಎಂದು ಕರೆಯುತ್ತಾರೆ. "Euthanasia" ಮೂಲತಃ ಗ್ರೀಕ್ ಶಬ್ದ; "ಒಳ್ಳೆಯ ಸಾವು" ಎಂದು ಅದರ ಅರ್ಥ. ಶಬ್ದಾರ್ಥವೇನೋ ಕೇಳಲು ಚೆನ್ನಾಗಿದೆ. ಆದರೆ ಇದು ಒಳ್ಳೆಯದಲ್ಲವೆಂದೇ ಅನೇಕರ ಅಭಿಪ್ರಾಯ. ಹೆಸರಿಗೆ 'ದಯಾಮರಣ' ಎನಿಸಿದರೂ ಇದರಲ್ಲಿ ಕಿಂಚಿತ್ತೂ ದಯೆ ಇಲ್ಲವೆಂದೇ ಅವರ ಅನಿಸಿಕೆ. ಅವರ ದೃಷ್ಟಿಯಲ್ಲಿ ದಯಾಮರಣವೂ ಒಂದು ರೀತಿಯ ಹತ್ಯೆ (murder). ಒಬ್ಬರು ಮತ್ತೊಬ್ಬರ ಸಾವನ್ನು ಬೇಗನೆ ಬರುವಂತೆ ಮಾಡುವ ಹೀನಕೃತ್ಯ. ಇದರಿಂದ ಸಮಾಜದಲ್ಲಿ ಅನೇಕ ಘನಘೋರ ಕೃತ್ಯಗಳು ಸಂಭವಿಸುವ ಆತಂಕವೂ ಇದೆ. ಉದಾಹರಣೆಗೆ ಆಸ್ತಿಯ ಮೇಲಿನ ಆಸೆಯಿಂದಾಗಿ ಕುಟುಂಬದ ಹಿರಿಯ ಸದಸ್ಯರನ್ನು ಕೊಲ್ಲಲು ಇದನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಗಳು ಇವೆ. ಭ್ರಷ್ಟಾಚಾರ ಎಲ್ಲೆಡೆಯೂ ಮೇರೆ ಮೀರಿ ಬೆಳೆದಿರುವುದರಿಂದಲೂ ಮನುಷ್ಯ ತುಂಬಾ ಸ್ವಾರ್ಥಿಯಾಗಿರುವುದರಿಂದಲೂ ವಯೋವೃದ್ಧರ ಜೀವಕ್ಕೆ ಇದೊಂದು ದೊಡ್ಡ ಕುತ್ತು ಆಗಬಹುದು.

ನಾವು ಬೆನಾರಸ್ ಹಿಂದೂ ಯೂನಿವರ್ಸಿಟಿಯಲ್ಲಿ ಓದುತ್ತಿದ್ದಾಗ ವಿದ್ಯಾರ್ಥಿಗಳ ಚಿಕಿತ್ಸೆಗೆಂದು ಒಂದು ವಿಶೇಷ ಚಿಕಿತ್ಸಾಲಯವಿತ್ತು. ಅದರಲ್ಲಿ ತುಂಬಾ ಪರಿಣತರಾದ ಹಿರಿಯ ವಯಸ್ಸಿನ ನಿವೃತ್ತ ವೈದ್ಯರೊಬ್ಬರು ಇದ್ದರು. ಬೆಳ್ಳನೆಯ ಮುಖ. ತುಂಬಾ ಗಂಭೀರವಾದ ವ್ಯಕ್ತಿತ್ವ. ಮೈಮೇಲೆ Apron ಹಾಕಿಕೊಂಡು ಅಪ್ಪಟ ಶ್ವೇತವಸ್ತ್ರಧಾರಿಯಾಗಿದ್ದ ಅವರು ದಪ್ಪನೆಯ ಗಾಜಿನ ಕನ್ನಡಕವನ್ನು ಧರಿಸುತ್ತಿದ್ದರು. ವಿದ್ಯಾರ್ಥಿಗಳು ಅವರನ್ನು ನೋಡಿ ಖಾಸಗಿಯಾಗಿ ಮಾತನಾಡುವಾಗ 'ಘೋಡಾ ಡಾಕ್ಟರ್' ಎಂದು ಮೂದಲಿಸುತ್ತಿದ್ದರು. ಈ ಮೂದಲಿಕೆಯ ಮಾತು ಆ ಡಾಕ್ಟರ್ ಕಿವಿಗೂ ಬಿದ್ದಿತ್ತು. ಆದರೂ ಅವರು ಕೋಪಗೊಳ್ಳದೆ ವಿದ್ಯಾರ್ಥಿಗಳನ್ನು ಪ್ರೀತಿಯಿಂದ ಮಾತನಾಡಿಸಿ ಒಳ್ಳೆಯ ಚಿಕಿತ್ಸೆಯನ್ನು ನೀಡುತ್ತಿದ್ದರು. ಕೆಲವು ವಿದ್ಯಾರ್ಥಿಗಳಂತೂ ಸ್ನೇಹಿತರೊಂದಿಗೆ ಬಂದು ಸಾಲಿನಲ್ಲಿ ನಿಂತು ನೆಪಮಾತ್ರಕ್ಕೆ ತಲೆನೋವೆಂದು ಏನೇನೋ ಸುಳ್ಳು ಹೇಳಿ ಅವರಿಂದ ಗುಳಿಗೆಗಳನ್ನು ಪಡೆದು ನಂತರ ಕಸದ ಬುಟ್ಟಿಗೆ ಹಾಕುತ್ತಿದ್ದರು. ನಿಮ್ಮನ್ನು ಈ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಏಕೆ 'ಘೋಡಾ ಡಾಕ್ಟರ್' ಎಂದು ಕರೆಯುತ್ತಾರೆಂದು ಒಮ್ಮೆ ಅವರನ್ನು ಯಾರೋ ಕೇಳಿದರು. ಅದಕ್ಕೆ ಅವರು ಕೊಟ್ಟ ಉತ್ತರ: "ಮೈಂ ಇಸ್ ವಿಶ್ವವಿದ್ಯಾಲಯ್ ಮೇಂ ಘೋಡೋಂ ಕೋ ಇಲಾಜ್ ಕರತಾ ಹೂಂ. ಇಸೀಲಿಯೇ ಮುಝೇ ಘೋಡಾ ಡಾಕ್ಟರ್ ಕಹತೇ ಹೈಂ!" (ನಾನು ಈ ವಿಶ್ವವಿದ್ಯಾನಿಲಯದಲ್ಲಿ ಕುದುರೆಗಳಿಗೆ ಚಿಕಿತ್ಸೆ ನೀಡುತ್ತೇನೆ; ಅದಕ್ಕಾಗಿ ನನ್ನನ್ನು 'ಕುದುರೆ ಡಾಕ್ಟರ್' ಎಂದು ಕರೆಯುತ್ತಾರೆ). ಅವರ ಈ ಮಾತನ್ನು ಕೇಳಿ ವಿದ್ಯಾರ್ಥಿಗಳು ಇಂಗು ತಿಂದ ಮಂಗನಂತಾದರು! ನಮಗೆ ಚೆನ್ನಾಗಿ ನೆನಪಿರುವಂತೆ ಆ ಹಿರಿಯ ವೈದ್ಯರು ತಮ್ಮ ಕುರ್ಚಿಯ ಹಿಂಬದಿಯ ಗೋಡೆಯ ಮೇಲೆ ಒಂದು ಬೋರ್ಡನ್ನು ತೂಗುಹಾಕಿದ್ದರು. ಅದರಲ್ಲಿ ಹೀಗೆ ಬರೆಯಲಾಗಿತ್ತು:

"I treat, He cures!". (ನಾನು ಚಿಕಿತ್ಸೆ ನೀಡುತ್ತೇನೆ; ಅವನು ವಾಸಿ ಮಾಡುತ್ತಾನೆ!). ಅಂದರೆ ನಾನು ವೈದ್ಯನಾಗಿ ರೋಗಿಗಳಿಗೆ ಚಿಕಿತ್ಸೆ ನೀಡುತ್ತೇನೆ, ನಿಜ. ಆದರೆ ರೋಗವನ್ನು ಗುಣಪಡಿಸುವವನು ನಾನಾಗಲೀ, ನಾನು ಕೊಟ್ಟ ಔಷಧಿಯಾಗಲೀ ಅಲ್ಲ. ನಿಜವಾಗಿ ರೋಗಿಯ ರೋಗವನ್ನು ನಿವಾರಣೆ ಮಾಡುವವನು ಅವನು: ಅಂದರೆ ಆ ದೇವರು! ಎಂತಹ ಅರ್ಥಪೂರ್ಣವಾದ ನುಡಿಗಟ್ಟು. ವೈದ್ಯರನ್ನು ದೇವರೊಂದಿಗೆ ಸಮೀಕರಿಸಿ 'ವೈದ್ಯೋ ನಾರಾಯಣೋ ಹರಿಃ' ಎಂದು ವೈದ್ಯರನ್ನು ದೇವರನ್ನಾಗಿ ಕಾಣುವ ಹೃದಯವೈಶಾಲ್ಯ ಭಾರತದ ರೋಗಿಗಳಲ್ಲಿದೆ. ಇದು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇಲ್ಲವೆಂದೇ ಹೇಳಬಹುದು. ಆ ದೇಶಗಳಲ್ಲಿ ವೈದ್ಯರು ಏನಾದರೂ ತಪ್ಪು ಮಾಡಿದರೆ ಅವರ ವಿರುದ್ಧ ಕೋರ್ಟುಗಳಲ್ಲಿ ಪರಿಹಾರ ಕೇಳಿ ಅನೇಕ ಕೇಸುಗಳು ದಾಖಲಾದ ಪ್ರಸಂಗಗಳಿವೆ. ನಮ್ಮ ದೇಶದಲ್ಲಿಯೂ ಇತ್ತೀಚೆಗೆ ಅಂತಹ ಪ್ರಕರಣಗಳು ದಾಖಲಾಗುತ್ತಿದ್ದರೂ ಸಂಖ್ಯಾದೃಷ್ಟಿಯಿಂದ ಬಹಳ ಕಡಿಮೆ. 'ನಮ್ಮ ಹಣೆಬರಹವೇ ಹೀಗಿರುವಾಗ ಪಾಪ ಆ ವೈದ್ಯರಾದರೂ ಏನು ಮಾಡಿಯಾರು!' ಎಂದು ಹಲುಬಿ ಸುಮ್ಮನಾಗಿಬಿಡುತ್ತಾರೆ. ಸಂಸ್ಕೃತಸಾಹಿತ್ಯದಲ್ಲಿ ವೈದ್ಯರನ್ನು ಹಂಗಿಸುವ ಮಾತುಗಳೂ ಇಲ್ಲದಿಲ್ಲ. ಆಧುನಿಕ ನರ್ಸಿಂಗ್ ಹೋಂಗಳನ್ನು ಕುರಿತೇ ಬರೆದಂತಿದೆ ಈ ಕೆಳಗಿನ ಶ್ಲೋಕ:

> **ವೈದ್ಯರಾಜ ನಮಸ್ತುಭ್ಯಂ ಯಮರಾಜ ಸಹೋದರಃ ।**
> **ಯಮೋ ಹರತಿ ಪ್ರಾಣಾನ್ ತ್ವಂ ಪ್ರಾಣಾಂಶ್ಚ ಧನಾನಿ ಚ ॥**
>
> (ವೈದ್ಯರಾಜನೇ ನಿನಗೆ ನಮೋನ್ನಮಃ
> ಯಮರಾಜನ ಸಹೋದರನೇ ನಿನಗೆ ನಮೋನ್ನಮಃ
> ಅಪಹರಿಸುವನು ಯಮನು ಕೇವಲ ಪ್ರಾಣವನು
> ನೀನಾದರೋ ಅಪಹರಿಸುವೆ ಪ್ರಾಣ, ಹಣ ಎರಡನೂ)

ಈ ಜೀವನ ದೇವರ ವರಪ್ರಸಾದ. ಈ ದೇಹ ದೇವರ ಅನುಗ್ರಹದಿಂದ ಪಡೆದದ್ದು; ಅವನ ಅನುಗ್ರಹವನ್ನು ಪಡೆಯಲು ಬಳಸಿಕೊಳ್ಳಬೇಕಾದ್ದು. 'ಕೂಡಲಸಂಗನ ಒಲಿಸಲು ಬಂದ ಪ್ರಸಾದ ಕಾಯವಿದು, ಕೆಡಿಸಲಾಗದು ಅಣ್ಣಗಳಿರಾ' ಎನ್ನುತ್ತಾರೆ ಬಸವಣ್ಣನವರು. ಜನನ ಮರಣ ನಮ್ಮ ಕೈಯಲ್ಲಿಲ್ಲ. ಇಂಥವರ ಮನೆಯಲ್ಲೇ ಹುಟ್ಟಬೇಕೆಂದು ಯಾರೂ ಅರ್ಜಿ ಹಾಕಿಕೊಂಡು ಹುಟ್ಟಲು ಸಾಧ್ಯವಿಲ್ಲ. ಅದು ದೈವೇಚ್ಛೆ. 'ನೀ ಹುಟ್ಟಿಸಿದಲ್ಲಿ ಹುಟ್ಟಿ, ನೀ ಕೊಂದಲ್ಲಿ ಸಾಯದೆ ಎನ್ನ ವಶವೇ ಅಯ್ಯಾ' ಎನ್ನುತ್ತಾರೆ ಬಸವಣ್ಣನವರು. ವಿಜ್ಞಾನ ಎಷ್ಟೇ ಮುಂದುವರಿದಿದ್ದರೂ ಸೃಷ್ಟಿಯ ರಹಸ್ಯವನ್ನು ಪೂರ್ಣವಾಗಿ ಭೇದಿಸಲು ಸಾಧ್ಯವಾಗಿಲ್ಲ.

**28.10.2009**

**ಶ್ರೀ ತರಳಬಾಳು ಜಗದ್ಗುರು**
**ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑